ದರವನ್ನು ನಿಗಧಿ ಮಾಡಿದ್ದೇವೆ. ವ್ಯಾಪಾರಿಗಳಿಗೆ ಮಾತ್ರ ಜಾಸ್ತಿ ಮಾಡಿದ್ದೇವೆ. ಇದನ್ನೂ ಸಹ ಪರಿಶೀಲನೆ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

3) ಮಂಗಳೂರಿನಿಂದ ಹೊರಡುವ ಬಸ್ಸುಗಳು ಹಂಪನಕಟ್ಟೆಯಂ ಮೂಲಕ ಹೋಗಲು ಮನವಿ

ಶ್ರೀ ಬಿ.ಎಂ. ಇದಿನಬ್ಬ–ಮಾನ್ಯ ಅಧ್ಯಕ್ಷರೇ, ಮಂಗಳೂರಿನ ಬಿಜೈಯಲ್ಲಿ ಕೆ.ಎಸ್ ಆರ್.ಟಿ.ಸಿ ಡಿಪೋ ಬಸ್ ನಿಲ್ದಾಣವಿದೆ, ಇಲ್ಲಿಂದ ಹೊರಡುವ ಎಲ್ಲಾ ಬಸ್ಸುಗಳು ಜ್ಯೋತಿ ಸರ್ಕಲ್‌ಗಾಗಿ ಬೆಂಗಳೂರು, ಮೈಸೂರು, ಇನ್ನಿತರ ಕಡೆಗೆ ಹೋಗುತ್ತವೆ, ಬರುತ್ತವೆ. ಆದರೆ ಮಂಗಳೂರಿನ ಜನನಿಬಿಡ ವಾಣಿಜ್ಯಂಶ್ಥಿರುವ ಹಂಪನಕಟ್ಟೆಗಾಗಿ ಈ ಬಸ್ಸುಗಳು ಹೋಗುವುದು, ಬರುವುದು ತುಂಬಾ ಅತಗತ್ಯವಾಗಿರುತ್ತದೆ. ಈ ರೀತಿ ಹಂಪನಕಟ್ಟೆಗಾಗಿ, ಜ್ಯೋತಿ ಸರ್ಕಲಿಗಾಗಿ ಹೋಗಿ, ಬಂದರೆ ಹೆಚ್ಚು ಪ್ರಯಾಣಿಕರೂ ಸಿಕ್ಕುತ್ತಾರೆ, ಸರಕಾರಕ್ಕೂ ಲಾಭವಾಗುತ್ತದೆ. ಸಾವಿರಾರು ಪ್ರಯಾಣಿಕರಿಗೂ ತುಂಬಾ ಅನುಕೂಲವಾಗುತ್ತದೆ, ಹಂಪನಕಟ್ಟೆಗಾಗಿ ಹೋಗುವುದರಿಂದ. ಮತ್ತು ಬರುವುದರಿಂದ ಐದು ನಿಮಿಷ ಕೂಡ ಹೆಚ್ಚು ವ್ಯಯವಾಗುವುದಿಲ್ಲ. ಸರ್ವ ಪ್ರಯಾಣಿಕರ ಕೇಳಿಕೆ ಇದಾಗಿದೆ. ಈ ಕುರಿತು ಸಾರಿಗೆ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸಾರಿಗೆ ಸಚಿವರಿಂದ ಮಾನ್ಯ ಸದಸ್ಯರಿಗೆ ಉತ್ತರವನ್ನು ತರಿಸಿಕೊಡುತ್ತೇನೆ.

ತರಕಾರಿ ಬೆಳೆಕಾರರಿಗೆ ಶೀತಲ ಗೃಹ ಮತ್ತಿತರ ಸೌಕರ್ಯಗಳನ್ನು ಒದಗಿಸುವುದು.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ಕರ್ನಾಟಕದ ಮುಖ್ಯ ಸಹಕಾರ ಸಂಘಗಳಲ್ಲಿ ಒಂದಾದ, ಹಣ್ಣು ಮತ್ತು ತರಕಾರಿ ಮಾರಾಟಗಾರರ ಸೊಸೈಟಿಯು ಮುಖ್ಯ ಕಚೇರಿ ಲಾಲ್‌ಬಾಗ್‌ನಲ್ಲಿದೆ. ಅಲ್ಲಿಗೆ ತರಕಾರಿ ಬೆಳೆಗಾರರಾದ ರೈತರು ಬಂದರೆ ಯಾವೊಂದು ಅನುಕೂಲಗಳಿಲ್ಲದೆ, ತಂಗಲು ಒಂದು ಮೇಲ್ಛಾವಣಿ ಇರುವ ಒಂದು ಜಾಗವಾಗಲಿ, ಕುಡಿಯುವ ನೀರು, ಶೌಚಗೃಹ, ಇತಾದಿಗಳು ಇಲ್ಲದೆ, ಅಲ್ಲಿಗೆ ಬರುವ ರೈತ ಬೆಳೆಗಾರರಿಗೆ ತುಂಬಾ ತೊಂದರೆಯಿದೆ. ಇದಂ ಸರಿಪಡಿಸ ಬೇಕು.

ಸ್ವಲ್ಪ ದೂರದೃಷ್ಟಿಯಿಂದ ದೂರದ ಮಾರ್ಕೆಟ್ ರೇಟ್‌ಗಳನ್ನು ಗಮನಿಸಿ, ರೈತರ ಬೆಳೆಗಳಾದ ಟೊಮೋಟೋ, ಬೀನ್ಸ್, ಆಲೂಗಡ್ಡೆ, ಇತರ ತರಕಾರಿಗಳನ್ನು ಕರ್ನಾಟಕದಿಂದ ಬೇರೆ ರಾಜ್ಯಗಳು, ಮುಖ್ಯವಾಗಿ, ಬಾಂಬೆ, ಕಲ್ಕತ್ತಾ, ಡೆಲ್ಲಿ, ಅಲಹಾಬಾದ್ ಇತರ ಕಡೆಗಳಿಗೆ ಲಾಭದಾಯಕವಾದ ಬೆಲೆ ಇದ್ದರೆ, ರಫ್ತು ಮಾಡುವ ವ್ಯವಸ್ಥೆ ಇರಬೇಕು. ಲಾಭದ ಒಂದೇ ದೃಷ್ಟಿಯಿಂದ ಕೆಲಸ ಮಾಡಬೇಕು. ಈ ಬಗ್ಗೆ ತಕ್ಕ ವ್ಯವಸ್ಥೆಯ ಏರ್ಪಾಡು ಅವಶ್ಯವಿದ್ದರೂ ಇನ್ನೂ ಆಗಿಲ್ಲ. ರೈತರ, ಬೆಳೆಗಾರರ ಹಿತರಕ್ಷಣೆ ಮುಂದಿರುವಂತಾಗ ಬೇಕು. ಈ ಬಗ್ಗೆ ಮಾನ್ಯ ಮಂತ್ರಿಗಳು ತಕ್ಕ ಕ್ರಮ ಕೈಗೊಳ್ಳಬೇಕು.

ಶೀತಲ ಗೃಹಗಳನ್ನು ಹೆಚ್ಚಿಗೆ ಸ್ಥಾಪಿಸ ಬೇಕು. ಕೋಲಾರದ ಶೀತಲಗೃಹ ತಕ್ಷಣ ಪ್ರಾರಂಭಿಸ ಬೇಕು (ಸಮಾರು ೧೫ ವರ್ಷದಿಂದ ಕಟ್ಟಿದ ಅರಮನೆಯಾಗಿದೆ) ರೈತರ ಬೆಳೆಯನ್ನು ಸೊಸೈಟಿಗಳು ರೈತರು ತರಕಾರಿ ಹಣ್ಣುಗಳನ್ನು ಬೆಲೆ ಕುಸಿಸಿದ್ದಾರೆ. ಶೀತಲ ಗೃಹದಲ್ಲಿ ಸ್ಪೋರ್ ಮಾಡಲು ಅನುಕೂಲವಿರುವಂತೆ ಕ್ರಮ ಕೈಗೊಳ್ಳಬೇಕೆಂದು ಕೇಳಿ ಮಾನ್ಯ ತೋಟಗಾರಿಕೆ ಮಂತ್ರಿಗಳು ಈ ಬಗ್ಗೆ ಹೇಳಿಕೆ ನೀಡಿ ರೈತರ ರಕ್ಷಣೆಗೆ ಬರುವಂತೆ ಆಶಿಸುತ್ತೇನೆ.

ಶ್ರೀ ವೈ. ಕೆ. ರಾಮಯ್ಯ.—ಅಧ್ಯಕ್ಷರೇ, ಮೂರು ದಿವಸಗಳ ಹಿಂದೆ ಈ ಸಂಘದ ಚಟುವಟಿಕೆಗಳ ಬಗ್ಗೆ ಮಾನ್ಯ ಸದಸ್ಯರು ಗಮನವನ್ನು ಸೆಳೆದ್ದಾರೆ ಸಮಗ್ರವಾಗಿ ಅವಕ್ಕೆ ಉತ್ತರವನ್ನು ಕೊಟ್ಟಿರುತ್ತೇನೆ. ಆದರೂ ಕೂಡ ಇನ್ನೊಮ್ಮೆ ನನ್ನ ಹೇಳಿಕೆಯನ್ನು ಈ ಕುರಿತು ಕೊಡುವುದಕ್ಕೆ ಇಷ್ಟಪಡುತ್ತೇನೆ.